**ಪಿಡಬ್ಲ್ಯೂ-3**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 05.07.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ.ಜಿ. ವಕೀಲರಿಂದಃ</u>**

ವಾದಿ ಮತ್ತು ಪ್ರತಿವಾದಿಗಳು ನನಗೆ ಸಂಬಂಧಿಕರು. ಅವರು ನನ್ನ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು. ಯಾವ ಸರ್ವೇ ನಂಬರ್ ಗಳ ಮೇಲೆ ಈ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತುಗಳು ಮೂಲತಃ ನನ್ನ ದೊಡ್ಡಪ್ಪ ಕಾಡಯ್ಯರವರಿಗೆ ಸೇರಿದ್ದವು. ಆ ಕುರಿತು ದಾಖಲೆಗಳನ್ನು ನಾನು ನೋಡಿಲ್ಲ. 1ನೇ ವಾದಿಯ ತಾಯಿ ಗೋಪಮ್ಮ ನನಗೆ ಪರಿಚಯ. ಸುಮಾರು 3 ವರ್ಷಗಳ ಹಿಂದೆ ಆಕೆ ಮರಣ ಹೊಂದಿರುತ್ತಾರೆ. ಆಕೆಗೆ ಓದು ಬರಹ ಬರುತ್ತಿರಲಿಲ್ಲ. ಆಕೆ ಹೆಬ್ಬೆಟ್ಟಿನ ರುಜು ಹಾಕುತ್ತಿದ್ದರು. ವಾದಿಯ ತಾಯಿ ಬದುಕಿದ್ದಾಗಲೆ ಆಕೆಯ ಮತ್ತು ಪ್ರತಿವಾದಿಯ ನಡುವೆ ದಾವ ಸ್ವತ್ತುಗಳ ಸಂಬಂಧ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ಯರಿಯೂರು ಗ್ರಾಮದಲ್ಲಿ ವಾಸವಿರುವ ಕರಿಯಪ್ಪ, ವೆಂಕಟರಾಮಯ್ಯ. ಮಲ್ಲಿಕಾರ್ಜುನ, ವೆಂಕಟರಾಜು, ಹುಲುಗಾದ್ರಿ ನನಗೆ ಗೊತ್ತು. ಮೇಲ್ಕಂಡವರು ದಿಃ 27.04.1994 ರಲ್ಲಿ ವಾದಿಯ ತಾಯಿ ಮತ್ತು ಪ್ರತಿವಾದಿಯ ನಡುವೆ ಆದ ವಿಭಾಗ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ತಹಶೀಲ್ದಾರ್ ಕಛೇರಿಯಲ್ಲಿ ಪ್ರತಿವಾದಿಯ ಹೆಸರಿಗೆ ಖಾತಾ ಮಾಡದಂತೆ ವಾದಿ ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ವಾದಿಗಳು ತಕರಾರು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ ಅರ್ಜಿಯನ್ನು ಪುರಸ್ಕರಿಸಿ ತಹಶೀಲ್ದಾರ್ ರವರು ಸದರಿ ವಿಭಾಗ ಪತ್ರದಂತೆ ಖಾತಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಕರಾರಿನ ಮೇಲೆ ತಹಶೀಲ್ದಾರ್ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ್ ನ್ಯಾಯಾಲಯದ ಪ್ರಕರಣ ಸಂಖ್ಯೆ ಆರ್.ಆರ್.ಟಿ ಸಂಖ್ಯೆಃ 4/1995-96 ಎಂದರೆ ನನಗೆ ಗೊತ್ತಿಲ್ಲ. ದಿಃ 21.01.1996 ರಂದು ತಹಶೀಲ್ದಾರ್ ರವರು ಪ್ರತಿವಾದಿಯ ಪರ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಖಾತಾವನ್ನು ಪ್ರಶ್ನಿಸಿ ವಾದಿಗಳು ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ದಾವ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿಗಳು ಬೇರೆ ಬೇರೆಯಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಅಲ್ಲಿ ಯಾರು ಉಳುಮೆ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಯರಿಯೂರು ಗ್ರಾಮದ ಶಿವಪ್ಪ ನನಗೆ ಗೊತ್ತಿಲ್ಲ. ಕಾಳಪ್ಪನ ಮಗ ಶಿವಪ್ಪ ನನಗೆ ಗೊತ್ತು. ಪ್ರತಿವಾದಿಗೆ ಬಂದ ಸ್ವತ್ತನ್ನು ಬಿಳಿಗಿರಯ್ಯ ಮತ್ತು ಶಿವಪ್ಪರವರ ಮೂಖಾಂತರ ಪ್ರತಿವಾದಿ ಉಳುಮೆ ಮಾಡಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಪಿಡಬ್ಲ್ಯೂ-3**

ವಾದಿಗಳಿಗೆ ಬಂದ ಸ್ವತ್ತನ್ನು ಕಾಳಪ್ಪನ ಮಗ ಶಿವಪ್ಪನ ಮೂಖಾಂತರ ಉಳುಮೆ ಮಾಡಿಸುತ್ತಿದ್ದಾರೆ ಎಂದರೆ ಸರಿ.

1ನೇ ವಾದಿ ದಿಃ 26.07.1994 ರಂದು ಪ್ರತಿವಾದಿಗೆ ರಮೇಶ್ ವಕೀಲರ ಮೂಖಾಂತರ ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿ ಮತ್ತು ಪ್ರತಿವಾದಿ ಸದರಿ ರಮೇಶ್ ವಕೀಲರ ಮೂಖಾಂತರ ವಿಭಾಗದಂತೆ ಖಾತಾ ಕೋರಿ ಸಲ್ಲಿಸಲು ಪ್ರಮಾಣ ಪತ್ರವನ್ನು ದಿಃ 27.02.2009 ರಂದು ಬರೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೂ ಪ್ರತಿವಾದಿಗೂ ವೈಮನಸ್ಸು ಇದೆ ಎಂದರೆ ಸರಿಯಲ್ಲ. ನಾನು ವಾದಿಗಳ ಜೊತೆ ಚೆನ್ನಾಗಿರುವ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಮಹದೇವಸ್ವಾಮಿ, ಬಸಪ್ಪ, ಬೆಳ್ಳಶೆಟ್ಟಿ ಮತ್ತು ಮಹದೇವಪ್ಪ ಎಂಬುವವರು ಇರಲಿಲ್ಲ. ದಾವ ಸ್ವತ್ತುಗಳು ವಾದಿಯ ತಂದೆಯ ಹೆಸರಿನಲ್ಲಿ ಇರಲಿಲ್ಲ ಮತ್ತು ಮೇಲ್ಕಂಡವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ.

ಚೆಲುವಯ್ಯರವರನ್ನು ಕಾಡಯ್ಯ ಎಂದು ಸಹ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕುರಿತು ದಾಖಲೆ ನೋಡಿಲ್ಲ. ಚಿಕ್ಕಹನುಮಯ್ಯ ಎಂಬುವವರು ವಾದಿ ಮತ್ತು ಪ್ರತಿವಾದಿಯ ಕುಟುಂಬದಲ್ಲಿ ಇದ್ದರು ಎಂದರೆ ಸಾಕ್ಷಿ ನಮ್ಮ ಅತ್ತೆಯ ಅಣ್ಣ ಚಿಕ್ಕಹನುಮಯ್ಯ ಇದ್ದರು ಎಂದು ನುಡಿಯುತ್ತಾರೆ. ಸದರಿ ಚಿಕ್ಕಹನುಮಯ್ಯರವರಿಗೆ ಮದುವೆ ಆಗಿರಲಿಲ್ಲ. ದಾವೆಯ ಬಗ್ಗೆ ನನಗೆ ವಿಷಯ ಗೊತ್ತಿಲ್ಲದಿದ್ದರು ಸಹ ವಾದಿಗಳ ಕೋರಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತುಗಳು ಈಗಾಗಲೇ ವಿಭಾಗವಾಗಿ ಅವರವರ ಸ್ವಾಧೀನದಲ್ಲಿ ಇವೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ನಡುವೆ ಯಾವುದೆ ಸ್ವತ್ತುಗಳು ವಿಭಾಗವಾಗದೆ ಬಾಕಿ ಇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ